ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಲೋಕಾಯುಕ್ತ ಪ್ರಕರಣಗಳ

ವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ

**Spl. C(Corruption) 4/2020**

ಫ್ರಾಸಾಃ **6** ಚಾಸಾಃ **8**

**ದಿನಾಂಕಃ 18-02-2025**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು..

| | |
|---|---|
| ಹೆಸರು | ಃ- ತಿಮ್ಮರಾಯಪ್ಪ |
| ತಂದೆಯ ಹೆಸರು | ಃ- ಮುನಿಸಾಮಪ್ಪ |
| ವಯಸ್ಸು | ಃ- 58 ವರ್ಷ |
| ಉದ್ಯೋಗ | ಃ- ಶಿಕ್ಷಕರು |
| ವಾಸ ಸ್ಥಳ | ಃ- ದೇಶಿಹಳ್ಳಿ |

ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ನಾನು ದಿನಾಂಕಃ 01-08-2014 ರಿಂದ ಡಿಸೆಂಬರ್ 2019 ರವರೆಗೆ ಬಿಇಓ ಕಛೇರಿ, ಕೆಜಿಎಫ್-ನಲ್ಲಿ ಶಿಕ್ಷಣ ಸಂಯೋಜಕನಾಗಿ ಕೆಲಸ ಮಾಡಿದ್ದೇನೆ.

ನನ್ನ ವ್ಯಾಪ್ತಿಗೆ ಗುಣಮಾಕನಹಳ್ಳಿ ಸಮೂಹ, ಕೇತಗಾನಹಳ್ಳಿ ಸಮೂಹ, ಕಳವಂಚಿ ಸಮೂಹ, ಕಾಮಸಮುದ್ರಂ ಸಮೂಹ ಇತ್ಯಾದಿ ಶಾಲಾ ಭೇಟಿ ಉಸ್ತುವಾರಿ ಮತ್ತು ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವ ಜವಾಬ್ದಾರಿ ವಹಿಸಿರುತ್ತಾರೆ. ಕಳವಂಚಿ ಸಮೂಹಕ್ಕೆ ಸಂಬಂಧಿಸಿದಂತೆ ಅಕ್ಷರ ಇಂಟರ್ ನ್ಯಾಷನಲ್ ಶಾಲೆಯ ಆಡಳಿತ ಮಂಡಳಿಯವರು ಮಾನ್ಯತೆ ನವೀಕರಣ ಮಾಡುವ ಸಂಬಂಧ ಕ್ಷೇತ್ರ ಶಿಕ್ಷಣಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ. ಆ ಕಾಲಕ್ಕೆ ಆರೋಪಿ ಸುರೇಶ್ ರವರೇ ಬಿಇಓ ಆಗಿದ್ದರು. ಆರೋಪಿ ನನಗೆ ಒಂದು ಆದೇಶ ಕೊಡುತ್ತಾರೆ. ಕಳವಂಚಿ ಸಮೂಹಕ್ಕೆ ಒಳಪಡುವ ಅಕ್ಷರ ಇಂಟರ್ ನ್ಯಾಷನಲ್ ಶಾಲೆಗೆ ಭೇಟಿ ನೀಡಿ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಹೇಳಿದ್ದಾರೆ. ಸದರಿ ಶಾಲೆಯ ಮಾನ್ಯತೆ ನೀಡಲು ಸದರಿ ವರದಿ ಬೇಕಾಗುತ್ತದೆ. ದಿನಾಂಕ 06-10-2018 ರಂದು ಸದರಿ ಶಾಲೆಗೆ ಭೇಟಿ ನೀಡಿ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ತಯಾರಿಸಿ ಆರೋಪಿಗೆ ನೀಡಿದ್ದೇನೆ. ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

ಆರೋಪಿ ನಿಪಿ-33 ಪರಿಶೀಲಿಸಿ ನನಗೆ ನಮೂನೆಯ ಪ್ರಕಾರ ಕೊಡಿ ಎಂದು ಹೇಳಿದ್ದಾರೆ. ಆ ಬಗ್ಗೆ ನಮೂನೆ-3 ರಲ್ಲಿ ವರದಿ ಸಲ್ಲಿಸಿದ್ದೇನೆ. ಅದನ್ನು ನಿಪಿ-34 ಎಂದು ಗುರುತಿಸಲಾಯಿತು. ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂಹೆಚ್ ವಕೀಲರಿಂದಃ

ಜೂನ್ ತಿಂಗಳಲ್ಲಿ ಆರೋಪಿ ನನಗೆ ವರದಿ ಕೊಡಲು ಸೂಚಿಸಿದ್ದಾರೆ. ಖಚಿತವಾಗಿ ದಿನಾಂಕ ಹೇಳಲಾರೆ. ನಾನು ದಿನಾಂಕಃ 06-10-2018 ರಂದು ವರದಿ ಸಲ್ಲಿಸಿದ್ದೇನೆ. ದಿನಾಂಕಃ 18-07-2018 ರಂದು ಶಾಲೆಗೆ ಭೇಟಿ ನೀಡಿದ್ದೇನೆ. ಎಲ್ಲಾ ಸೌಲಭ್ಯಗಳು ಇದ್ದವು, 1-2 ಕುಂದುಕೊರತೆ ಕಂಡು ಬಂತು. ನನ್ನ ವರದಿಯಲ್ಲಿ ಯಾವ ಸೌಲಭ್ಯ ಇಲ್ಲವೋ ಅದನ್ನು ನಮೂದಿಸಿದ್ದೇನೆ. ಆಟದ ಮೈದಾನ ಸರಿಯಾಗಿರುತ್ತದೆ. ಶೌಚಾಲಯಗಳು ಸರಿ ಇರುತ್ತದೆ. (ಫೋಟೋಗಳನ್ನು ನೋಡಿ ಹೇಳಿದ್ದಾರೆ). ಪುಟ ಸಂಖ್ಯೆ-124 ರ ಬರವಣಿಗೆ ಬಿಇಓ ಕಛೇರಿಯವರದ್ದು. ನಿಪಿ-16 ರ ಪುಟ ಸಂಖ್ಯೆ-124 ರಲ್ಲಿ ಯಾವ ದಿನಾಂಕದಂದು ನಾನು ಶಾಲೆಗೆ ಹೋಗಿ ಭೇಟಿ ಮಾಡಿ ವರದಿ ಕೊಡಿ ಎಂದು ಕಂಡು ಬರುವುದಿಲ್ಲ. ಬಿಇಓ ಕಛೇರಿಯಿಂದ ಸದರಿ ಶಾಲೆಗೆ 25 ಕಿಮೀ ಆಗುತ್ತದೆ. ಅನೇಕ ಬಾರಿ ಸದರಿ ಶಾಲೆಗೆ ಹೋಗಿದ್ದೇನೆ. ಶಾಲೆಯ ಸ್ಕ್ರೇಟರಿ ಫ್ರಾಸಾ-1 ರವರ ಪರಿಚಯ ಇದೆ. ಬಿಇಓ ಕಛೇರಿಯಲ್ಲಿ ತಯಾರಿಸಲಾದ ಟಿಪ್ಪಣಿ ಷರಾಗಳನ್ನು ಸಂಬಂಧಿತ ಕ್ಲರ್ಕ್, ಮ್ಯಾನೇಜರ್, ಸೂಪರಿನ್‌ಟೆಂಡೆಂಟ್ ಪರಿಶೀಲಿಸುತ್ತಾರೆ ಎಂದರೆ ಸರಿ. ಆ ರೀತಿ ಟಿಪ್ಪಣಿ ಮಾಡಿದ ನಂತರ ಬಿಇಓ ಕಛೇರಿಗೆ ಹೋಗುತ್ತದೆ ಎಂದರೆ ಸರಿ. 2-3 ತಿಂಗಳ ಕಾಲ ನಾನು ವರದಿ ನೀಡಲು ಸಮಯ ತೆಗೆದುಕೊಂಡಿರುತ್ತೇನೆ.

ಮರು ವಿಚಾರಣೆಃ ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

ಸಹಿ/-

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.